ಕರ್ನಾಟಕ ಸರ್ಕಾರ

ಗ್ರಾಅಪ 20 REP 2019

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:02.08.2019.

# ಸುತ್ತೋಲೆ

ವಿಷಯ : ಕೇಂದ್ರೀಕೃತ ಸೌರ ವಿದ್ಯುತ್ ಘಟಕಗಳ ಮೂಲಕ ಸೌರ ಉಪಕರಣಗಳ ಮಾದರಿ ಪರಿಶೀಲನೆ ಹಾಗೂ ದೃಢೀಕರಣವನ್ನು ಯೋಜನಾ ಅಭಿಯಂತರರು (ಸಗ್ರಾಇಂಕಾ), ಜಿಲ್ಲಾ ಪಂಚಾಯತ್‌ರವರು ನಿರ್ವಹಿಸುವ ಕುರಿತು.

ಸೌರ ಉಪಕರಣಗಳ ತಾಂತ್ರಿಕತೆ, ನಿರ್ವಹಣೆ, ಉಸ್ತುವಾರಿ ಸಮರ್ಪಕವಾಗಿ ಇಲ್ಲದೇ ಸರ್ಕಾರದ ಅನುದಾನ ಸರಿಯಾದ ರೀತಿಯಲ್ಲಿ ಉಪಯೋಗವಾಗದೇ ಪೋಲಾಗುತ್ತಿದೆ. ಇದನ್ನು ತಪ್ಪಿಸುವ ಹಾಗೂ ಯೋಜನೆಯ ಪ್ರಯೋಜನವನ್ನು ಗ್ರಾಮೀಣ ಜನತೆಗೆ ತಲುಪಿಸುವ ನಿಟ್ಟಿನಲ್ಲಿ ರಃ ನವೀಕರಸಹುದಾದ ಇಂಧನ ಮೂಲಗಳ ವಿಷಯದಲ್ಲಿ ಅನುಭವ ಹೊಂದಿರುವ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರರ ಸೇವೆಯನ್ನು ಈ ಕೆಳಕಂಡಂತೆ ಉಪಯೋಗಿಸಿಕೊಳ್ಳುವುದು.

1. ನವೀಕರಿಸಬಹುದಾದ ಸೌರ ಇಂಧನ ಉಪಕರಣ ಅಳವಡಿಕೆಯಲ್ಲಿ ನವೀಕರಿಸಬಹುದಾದ ಇಂಧನ ಮೂಲ ಮಂತ್ರಾಲಯ(MNRE), ನವ ದೆಹಲಿ ಇವರ Specification ಇರುವ ಕುರಿತು ಯೋಜನಾ ಅಭಿಯಂತರರು(ಸಗ್ರಾಇಂಕಾ) ರವರಿಂದ ದೃಢೀಕರಿಸಿಕ್ಕೊಳ್ಳುವುದು.
2. ಸೌರ ಉಪಕರಣಗಳ ಅನುಷ್ಠಾನ ಕುರಿತಂತೆ ಇ-ಟೆಂಡರ್‌ನಲ್ಲಿನ ಟೆಕ್ನಿಕಲ್ ಬಿಡ್‌ನಲ್ಲಿ ಯೋಜನಾ ಅಭಿಯಂತರರ ದೃಢೀಕರಣ ಪಡೆಯುವುದು.
3. ಸೌರ ಉಪಕರಣಗಳ ಅನುಷ್ಠಾನ ಹಾಗೂ ಕಾರ್ಯಕ್ಷಮತೆ ಕುರಿತಂತೆ ಯೋಜನಾ ಅಭಿಯಂತರರು ಪರಿಶೀಲನೆ ನಡೆಸಿ ದೃಢೀಕರಣ ನೀಡಿದ ತರುವಾಯ ಅನುದಾನ ಪಾವತಿಸಲು ಕ್ರಮ ವಹಿಸುವುದು.

2\. ಸೌರ ಉಪಕರಣಗಳ ಉತ್ಪಾದಕರನ್ನು Empanel ಮಾಡಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

3\. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ ಅನುದಾನ, 14ನೇ ಹಣಕಾಸು ಯೋಜನೆ, ಮಾನ್ಯ ಲೋಕ ಸಭಾ, ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗಳ ಅನುದಾನಗಳಲ್ಲಿ ಸೌರ ವಿದ್ಯುತ್ ಉಪಕರಣಗಳ ಅನುಷ್ಠಾನಕ್ಕಾಗಿ ಸಂಬಂಧಿಸಿದಂತೆ ಹಾಲಿ ಇರುವ ಶೇ.2ರಷ್ಟು ಮೀಸಲಿಡುವ ಅನುದಾನ ಶೇ.5ಕ್ಕೆ ಪರಿಷ್ಕರಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.

4. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳಲ್ಲಿ ಸೌರ ಉಪಕರಣಗಳ ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಅನುಮೋದಿಸುವ ಕುರಿತಂತೆ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಇಂಧನ ಕೋಶವನ್ನು ರಚಿಸುವುದು.

| | | |
|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಅಧ್ಯಕ್ಷರು |
| 2 | ಉಪ ಕಾರ್ಯದರ್ಶಿ(ಅಭಿವೃದ್ಧಿ) | ಸದಸ್ಯರು |
| 3 | ಯೋಜನಾ ನಿರ್ದೇಶಕರು | ಸದಸ್ಯರು |
| 4 | ಮುಖ್ಯ ಯೋಜನಾ ಅಧಿಕಾರಿ | ಸದಸ್ಯರು |
| 5 | ಮುಖ್ಯ ಲೆಕ್ಕಾಧಿಕಾರಿ | ಸದಸ್ಯರು |
| 6 | ಆಯಾ ಇಲಾಖೆಯ ಆಹ್ವಾನಿತ ಪ್ರತಿನಿಧಿ | ಸದಸ್ಯರು |
| 7 | ಯೋಜನಾ ಅಭಿಯಂತರರು(ಸಗ್ರಾಇಂಕಾ) | ಸದಸ್ಯ ಕಾರ್ಯದರ್ಶಿ |

12/8/19.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,
ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿಯನ್ನು,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಅಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
2. ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.